


(ಆಶಾವಾದದ ಪರಮಾವಧಿ)
**ಹುಡುಗ:** ಐ ಲವ್ ಯೂ.
**ಹುಡುಗಿ:** ಹ್ಹ ಹ್ಹ ಹ್ಹ ಹ್ಹಾ.
**ಹುಡುಗ (ತನ್ನ ಗೆಳೆಯನಲ್ಲಿ):** ನೋಡಿದೆಯಾ, ಅವಳು 4 ಬಾರಿ 'ಹ್ಞಾಂ' ಅಂದಳು.

***

**ಗೋಪಿ:** ಸುಖೀ ವೈವಾಹಿಕ ಜೀವನಕ್ಕೆ ಸೂತ್ರಗಳನ್ನು ತಿಳಿಸುವಿರಾ ಸ್ವಾಮೀಜಿ?
**ಸ್ವಾಮೀಜಿ:** ಎಲ್ಲಿಯವರೆಗೆ ನೀನು ಬಾಯಿ ಮುಚ್ಚಿಕೊಂಡಿರುತ್ತೀಯೋ, ಎಲ್ಲಿಯವರೆಗೆ ನಿನ್ನ ಪರ್ಸ್ ತೆರೆದುಕೊಂಡಿರುತ್ತೋ ಅಲ್ಲಿಯವರೆಗೆ ನೀನು ಸುಖಿಯಾಗಿರುವೆ ಮಗು.

***

**ಹುಡುಗಿ:** ಈ ಬಾರಿ ಪರೀಕ್ಷೆಯಲ್ಲಿ ಫೇಲಾದರೆ, ರಿಕ್ಷಾವಾಲಾನ ಜೊತೆ ಮದುವೆ ಮಾಡಿಸುವುದಾಗಿ ಅಪ್ಪ ಹೇಳಿದ್ದಾರೆ.
**ಗುಂಡ:** ನಾನು ಫೇಲಾದರೆ ನನಗೆ ರಿಕ್ಷಾ ಖರೀದಿಸಿ ಕೊಡುವುದಾಗಿ ನನ್ನಪ್ಪ ಹೇಳಿದ್ದಾರೆ.

***

**ಹುಡುಗ:** ನೀನೇಕೆ ಇಷ್ಟು ದಪ್ಪಗಿರುವೆ?
**ಹುಡುಗಿ:** ನಮ್ಮ ಮನೆಯ ಫ್ರಿಜ್ ಹಾಳಾಗಿದೆ.
**ಹುಡುಗ:** ಅದಕ್ಕೆ?
**ಹುಡುಗಿ:** ಅಳಿದುಳಿದ ಎಲ್ಲವನ್ನೂ ತಿನ್ನುತ್ತಿದ್ದೇನೆ.

***

ಜೂನ್ 22ರ ಮಧ್ಯಾಹ್ನ ಮೆಡಿಕಲ್ ಸ್ಟೋರಿನ ಮಾಲೀಕ ಗೋಪಿ ತುಂಬಾ ಖುಷಿಯಾಗಿದ್ದ.
ಕಾರಣವೇನೆಂದು ಗೆಳೆಯ ರಾಮು ಕೇಳಿದಾಗ ಆತ ಹೇಳಿದ, 'ನಿನ್ನೆ ಅಂತರರಾಷ್ಟ್ರೀಯ ಯೋಗ ದಿನವಾಗಿತ್ತು ತಾನೆ? ಇವತ್ತು ಮುಂಜಾನೆ ನನ್ನ ಸ್ಟೋರಿನಲ್ಲಿದ್ದ ಅಯೋಡೆಕ್ಸ್, ಟೈಗರ್ ಬಾಮ್, ರೆಲಿಸ್ಪ್ರೇ, ನೋವಿನ ಮಾತ್ರೆ ಇತ್ಯಾದಿಗಳು ಖಾಲಿಯಾದವು ಕಣೋ'.

50ಕ್ಕೂ ಹೆಚ್ಚು ಅನುಪಯುಕ್ತ ನಿಗಮ, ಮಂಡಳಿಗಳ ರದ್ದು



ಅಧ್ಯಕ್ಷರಾಗಬೇಕೆಂದಿದ್ದ ಅವರ ಕೊನೆ ಆಸೆಯ ಕೊಂಡಿಯೂ ಕಳಚಿತು.

ದೇವಾಲಯಗಳಲ್ಲಿ ಕಿಕ್ಕಿರಿದ ಮಹಿಳೆಯರು



ಬಸ್ ಚಾರ್ಜು, ಅನ್ನ ಪ್ರಸಾದವೇನೋ ಉಚಿತ. ಆದರೆ ಶಾಪಿಂಗ್?

ನಿಜವಾದ ನಿರಾಸೆಯೆಂದರೇನು?
ಈ ಪ್ರಶ್ನೆಯನ್ನು ದೇವಸ್ಥಾನದಲ್ಲಿ ಪೂಜೆಯ ಬಳಿಕ ವಿತರಣೆಯಾಗುವ ಪ್ರಸಾದದ ಪೊಟ್ಟಣವು ಸಿಗದೆ ಹತಾಶೆಯಿಂದ ಹೊರ ಬಂದಾಗ ಅಲ್ಲಿ ಚಪ್ಪಲಿಗಳೂ ಕಾಣೆಯಾಗಿರುವುದನ್ನು ಕಂಡುಕೊಂಡ ಯಾತ್ರಾರ್ಥಿಯನ್ನು ಕೇಳಬೇಕೆನ್ನುವುದು ಗುಂಡನ ಸ್ವಾನುಭವದ ಉತ್ತರ!

**ಟೀಚರ್:** ಹೋಂ ವರ್ಕ್ ಏಕೆ ಮಾಡಲಿಲ್ಲ?
**ಚಿಂಟೂ:** ನಾನು ಅಭ್ಯಾಸ ಮಾಡಲು ಕುಳಿತಾಗಲೇ ಕರೆಂಟ್ ಹೋಯಿತು ಟೀಚರ್.
**ಟೀಚರ್:** ಹಾಗಾದರೆ ಕರೆಂಟ್ ಬಂದ ಮೇಲೆ ನೀನೇಕೆ ಓದಲಿಲ್ಲ?
**ಚಿಂಟೂ:** ನನ್ನಿಂದಾಗಿ ಪುನಃ ಕರೆಂಟ್ ಹೋಗುವುದು ಬೇಡವೆಂದು ಟೀಚರ್.

***

**ಹುಡುಗಿ:** ನೀನು ಎಲ್ಲೆಲ್ಲಿ ಹೋಗುತ್ತೀಯೋ ಅಲ್ಲೆಲ್ಲಾ ನಾನು ನಿನ್ನ ನೆರಳಂತೆ ಬರುವೆ ಪ್ರಿಯಾ.
**ಹುಡುಗ:** ನನಗೆ ಮೊದಲೇ ಗೊತ್ತಿತ್ತು, ಕಣೆ.
**ಹುಡುಗಿ:** ಏನಂತ?
**ಹುಡುಗ:** ನೀನೊಂದು ಪಿಶಾಚಿನಿ ಅಂತ.

***

**ಗುಂಡ:** 'ಮೆಟ್ರೊ'ದಲ್ಲಿ ಪ್ರಮಾದವಾಯಿತು.
**ಗೋಪಿ:** ಅಂಥಾದ್ದೇನಾಯಿತು?
**ಗುಂಡ:** ನಾನು ಕೂತಿದ್ದೆ. ನನ್ನೆದುರು ನಿಂತಿದ್ದ ಹುಡುಗಿ ತನ್ನ ಮೊಬೈಲಿನಲ್ಲಿ ರಾಷ್ಟ್ರಗೀತೆ ಹಾಕಿದಳು. ಗೌರವ ಸೂಚಕವಾಗಿ ನಾನು ಎದ್ದು ನಿಂತೆ. ತಕ್ಷಣ ಅವಳು ಗೀತೆ ನಿಲ್ಲಿಸಿ ನನ್ನ ಸೀಟಿನಲ್ಲಿ ಕೂತುಬಿಟ್ಟಳು ಕಣೊ!

ಸಂಗ್ರಹ: **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**